<u>ಸಾಕ್ಷಿಯನ್ನು ದಿನಾಂಕಃ-24.11.2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.</u>

<u>ಪಾಟೀಸವಾಲುಃ ಶ್ರೀ ಪಿಕೆ ಜಿ ವಕೀಲರಿಂದ</u>

1. ನಾನು ಪಿರಿಯಾ ಪಟ್ಟಣ್ಣದ ಮುತ್ತೂರು ಗ್ರಾಮದಲ್ಲಿ ಸುಮಾರು 10 ವರ್ಷದಿಂದ ವಾಸವಿರುತ್ತೆನೆ. ಒಂದನೇ ಪ್ರತಿವಾದಿಯ ಗಂಡ ನನ್ನ ಅಣ್ಣ ಅಂದರೆ ಸರಿ. ನಾನು 4ನೇ ಪ್ರತಿವಾದಿ ಪರ ಸಾಕ್ಷಿ ನುಡಿಯಲು ಬಂದಿರುತ್ತೇನೆ . ಅವರು ನನಗೆಯಾವುದೇ ರೀತಿ ಸಂಬಂಧ ಇರುವುದಿಲ್ಲ. 4ನೇ ಪ್ರತಿವಾದಿಯು ಹೊಡೆಯನಪುರ ಗ್ರಾಮದ ಸರ್ವೆ 148/1 ರಲ್ಲಿ ವಾಸವಾಗಿರುತ್ತಾರೆ. ಅವರಿಗೆ ಇರುವಂತಹ ಜಾಗದಲ್ಲಿ ಕಾಪಿ ಮತ್ತು ಸಿಲ್ವರ್ ಮರಗಳನ್ನು ವಾದಿಯು ಬೆಳೆಸಿರುತ್ತಾರೆ ಎಂದರೆ ಸರಿಯಲ್ಲ. 4ನೇ ಪ್ರತಿವಾದಿಈಗ ವಾಸವಾಗಿರುವಂತಹ ಮನೆ ಮತ್ತು ಸುತ್ತ ಮುತ್ತಲಿನ ಜಾಗ ಯಾರ ಹೆಸರಿನಲ್ಲಿತರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ. ಸದರಿ 4 ನೇ ಪ್ರತಿವಾದಿಯು ಇರವಂತಹ ಜಾಗ ವಾದಿಯವರದ್ದು ಆಗಿದ್ದು 4ನೇ ಪ್ರತಿವಾದಿಯು ಒತ್ತು ವರಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

2. 1ನೇ ಪ್ರತಿವಾದಿಯು ಸಹ ದಾವಾ ಶೆಡ್ಯೂಲ್ ಎ ಪೈಕಿ ಸುಮಾರು 42 ಸೆಂಟ್ ಜಾಗವನ್ನು ಒತ್ತು ವರಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಮತ್ತು 4ನೇ ಪ್ರತಿವಾದಿ ವಾದಿಯವರ ಸ್ವತ್ತನ್ನು ಒತ್ತುವರಿ ಮಾಡಿಕೊಂಡಿರುವ ವಿಚಾರ ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. 4ನೇ ಪ್ರತಿವಾದಿ ಇರುವಂತಹ ಜಾಗ ಅವರ ತಂದೆ ಲಿಂಗಪ್ಪ ಪೂಜರಿಯವರು ಅಲ್ಲಿಯೇ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಲಿಂಗಪ್ಪ ಪೂಜಾರಿಯವರನ್ನು ನೋಡಿರುತ್ತೇನೆ. ಲಿಂಗಪ್ಪ ಪೂಜಾರಿಯವರು ಅಲ್ಲಿಯೇ ವಾಸವಾಗಿದ್ದರ ಬಗ್ಗೆ ನಿಮಗೆ ಯಾರು ಹೇಳಿರುತ್ತಾರೆ ಎಂದರೆ ಸಾಕ್ಷಿಯು ನಾನೇ ನೋಡಿರುತ್ತೇನೆ ಎಂದು ನುಡಿದಿರುತ್ತಾರೆ. ವಾದಿಯು 1ನೇ ಪ್ರತಿವಾದಿಯ ವಿರುದ್ದವು ಸಹ ಸ್ವಾಧೀನಕ್ಕೆ ದಾವೆ ಹೂಡಿರುತ್ತಾರೆ ಎಂದರೆ ಸರಿ.

3. ನನಗೆ ಮದುವೆ ಆಗಿ ಸುಮಾರು 25 ವರ್ಷ ಆಗಿರುತ್ತದೆ. ನಾನು ಮದುವೆ ಆದಾಗಿನಿಂದಲೂ ನನ್ನ ಹೆಂಡತಿ ಅದ ಮುತ್ತೂರಿನಲ್ಲಿ ವಾಸವಾಗಿರುತ್ತೇನೆ ಎಂದರೆ ಸರಿಯಲ್ಲ. ಕಳೆದ 25 ವರ್ಷ ದಿಂದ ಹೊಡೆಯನ ಪುರ ಗ್ರಾಮಕ್ಕೆ ನಾನು ವಾಪಸಸು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನಾನು 1 ಮತ್ತು 4ನೇ ಪ್ರತಿವಾದಿಯ ರವರ ಮಾತನ್ನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಶ್ರೀ ಡಿಕೆಟಿ ವಕೀಲರಿಂದ

ನಾನು ನನ್ನ ಮೂಲ ವಾಸದ ವಿಳಾಸ ಗೋಪಾಲಪುರ

1 ನೇ ಪ್ರತಿವಾದಿ ಪರ ಪಾಟೀಸವಾಲಿಗಾಗಿ ಮುಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ.ಕೇ.ಸರಿ ಇದೆ.

Sd/-

ಪ್ರ. ಸಿ.ಜೆ ಮತ್ತು ಜೆಎಂ.ಎಫ್ ಸಿ

ಸೋಮವಾರಪೇಟೆ